**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆ: 106/2023**

**ಸಾಕ್ಷಿಯನ್ನು ದಿಃ 14.05.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಅರ್ಜಿಯ ಮೇಲಿನ ಆದೇಶದಂತೆ ಪಾಟೀ ಸವಾಲುಃ ಆರೋಪಿ ಪರ ಶ್ರೀ.HPL ವಕೀಲರಿಂದಃ**

ಆರೋಪಿಯ ಪೂರ್ಣ ಹೆಸರು ನಿಮಗೆ ಗೊತ್ತಿದೆಯೇ ಎಂದರೆ ಅಭಿಷೇಕ್. ಅವರ GST ನಂಬರ್ ಗೊತ್ತಿದೆಯೇ ಎಂದರೆ ಇಲ್ಲ. ನೀವು ನಿರ್ವಹಿಸುವ ಡೈಲಿ ಬುಕ್ಕನ್ನು ಹಾಜರುಪಡಿಸಿದ್ದೀರಾ ಎಂದರೆ ನನ್ನ ಬಳಿ ಇದ್ದ ಎಲ್ಲಾ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. Invoice bill ಗೆ ಟ್ಯಾಕ್ಸ್ ಅಧಿಕಾರಿಗಳು ಸೀಲು ಸಹಿ ಹಾಕಿಕೊಡಬೇಕು ಎಂದರೆ ಎಲ್ಲಾ

ಇದೆ. ಸಾಕ್ಷಿ ಮುಂದುವರಿದು Invoice bill ನಲ್ಲಿ ಟ್ಯಾಕ್ಸ್ ಅಧಿಕಾರಿಗಳ ಸಹಿ ಮತ್ತು ಸೀಲು ಬರುವುದಿಲ್ಲ ನನ್ನ ಸಹಿ ಮಾತ್ರ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿದ ಬಿಲ್ ಗಳನ್ನು ಅಭಿ ಹೊಸೂರು ಎಂಬ ಹೆಸರಿನಲ್ಲಿ ನೀಡಲಾಗಿದೆ. ಅಭಿಷೇಕ್ ಎಂಬ ಹೆಸರಿನಲ್ಲಿ ಬಿಲ್ ನೀಡಲು ತೊಂದರೆ ಇತ್ತೇ ಎಂದರೆ ಅವರನ್ನು ಅಭಿ ಎಂದು ಕರೆಯುವ ಕಾರಣ ಅದೇ ಹೆಸರಿನಲ್ಲಿ ಬಿಲ್ ನೀಡಿದ್ದೇನೆ. ಯಾವ ಯಾವ ದಿನಾಂಕಗಳಂದು ಗೊಬ್ಬರ ಕೊಟ್ಟಿದ್ದೇನೆ ಎಂದು ದೂರಿನಲ್ಲಿ ಬರೆಸಿದ್ದೇನೆ. ನಾನು ಹಾಜರುಪಡಿಸಿದ ಬಿಲ್ಲುಗಳ ಪೈಕಿ ಕೆಲವು ಬಿಲ್ಲುಗಳು ಜೆರಾಕ್ಸ್ ಬಿಲ್ಲುಗಳು ಎಂದರೆ ಸರಿಯಲ್ಲ. ನಾನು 2020-21ನೇ ಸಾಲಿನಲ್ಲಿ ಸಾಲವಾಗಿ ಗೊಬ್ಬರ ಕೊಟ್ಟಿದ್ದೇನೆ ಎಂದು ಬರೆಸಿದ್ದೇನೆ. ನಾನು ಚೆಕ್ಕು ಹಾಜರುಪಡಿಸುವ ಹಿಂದೆ ಆರೋಪಿ ಸಾಲ ಪಡೆದುಕೊಂಡಿದ್ದನ್ನು ಕೊಟ್ಟಿದ್ದಾರೆ. ಅದಾದ ನಂತರ ಆರೋಪಿ ಹಣ ಕೊಟ್ಟಿದ್ದಾರೆಯೇ ಎಂದರೆ ಇಲ್ಲ. ನಾನು ಹಾಜರುಪಡಿಸಿದ ಕ್ರೆಡಿಟ್ ಬಿಲ್ ದಿಃ 26.06.2020 ರಿಂದ 20.02.2026ರವರೆಗೆ ಇದೆ ಎಂದರೆ ಯಾವ ದಿನಾಂಕದಂದು statement ತೆಗೆಯಲಾಗುತ್ತದೆಯೋ ಆ ದಿನದವರೆಗೆ statement ಬರುತ್ತದೆ. ಸಾಕ್ಷಿ ಮುಂದುವರಿದು ವಹಿವಾಟು 2026ರವರೆಗೆ ಇಲ್ಲ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿದ ಕ್ರೆಡಿಟ್ ಬಿಲ್ ಪ್ರಕಾರ ಬಾಕಿ ಹಣ 2,74,470/- ಎಂದರೆ ಸರಿ. ಸಾಕ್ಷಿ ಮುಂದುವರಿದು ಆ ಪೈಕಿ ಹಣ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿದ ಕ್ರೆಡಿಟ್ ಬಿಲ್ ಪ್ರಕಾರ ಕೊನೆಯಲ್ಲಿ ಬಾಕಿ ಹಣ ರೂ.1,79,110/- ಎಂದರೆ ಸರಿ. ಸಾಕ್ಷಿ ಮುಂದುವರಿದು ಆರೋಪಿಗೆ ಸಂಬಂಧಿಸಿದಂತೆ ಎರಡು ಲೆಕ್ಕಗಳಿದ್ದು ಮೇಲೆ ಹೇಳಿದ ಕ್ರೆಡಿಟ್ ಬಿಲ್ ನಲ್ಲಿರುವ ಹಣ ಮತ್ತು Invoiceನಲ್ಲಿರುವ ಹಣ ಬರಬೇಕಾಗಿದೆ. ನನ್ನ ದೂರಿನಲ್ಲಿ ಆರೋಪಿಗೆ ಸಂಬಂಧಿಸಿದಂತೆ ಎರಡು ಅಕೌಂಟ್ ಗಳಿವೆ ಎಂದು ಬರೆಸಿದ್ದೇನೆ. ಎರಡು ಅಕೌಂಟ್ ಗಳು ಯಾವ ಯಾವ ತಾರೀಖಿನಂದು ಬಾಕಿಯಾಗಿವೆ ಎಂದುನಿಖರವಾಗಿ ಈಗ ಹೇಳಲಾಗುವುದಿಲ್ಲ .

ನಾನು ಹಾಜರುಪಡಿಸಿದ invoice bill ನಲ್ಲಿ ರೂ.6,000/- ರೂ.5998/- ಮತ್ತು ರೂ.5998/- ಎಂದು ಬರೆಯಲಾಗಿದೆ ಎಂದರೆ ಅದು GST ಹಣವಾಗಿದೆ. 2022 ಡಿಸೆಂಬರ್ ನಲ್ಲಿ ಆರೋಪಿ ನನಗೆ ಚೆಕ್ಕನ್ನು ಕೊಟ್ಟರು. ದಿಃ 05.05.2020ರ invoice bill ಕೊಡುವಾಗ ಆರೋಪಿ ನನಗೆ ಚೆಕ್ಕನ್ನು ಕೊಟ್ಟಿಲ್ಲ ನಂತರ ಕೊಟ್ಟಿದ್ದಾರೆ.

ಆರೋಪಿ invoice bill ಕೊಟ್ಟ ನಂತರ ನನಗೆ ಚೆಕ್ಕು ಕೊಟ್ಟಿದ್ದಾರೆ ಎಂದು ದೂರಿನಲ್ಲಿ ಬರೆಸಿದ್ದಿರಾ ಎಂದರೆ ಬರಬೇಕಾದ ಹಣ ಕೇಳಿದಾಗ ಚೆಕ್ ಕೊಟ್ಟಿದ್ದಾರೆ ಎಂದು ಬರೆಸಿದ್ದೇನೆ. 2023, 2024 ಮತ್ತು 2025ನೇ ಸಾಲಿನ invoice bill ಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಆ ಅವಧಿಯಲ್ಲಿ ಆರೋಪಿ ನನ್ನೊಂದಿಗೆ ವಹಿವಾಟು ಮಾಡಿರಲಿಲ್ಲ. ನಾನು ಆರೋಪಿಯಿಂದ ಚೆಕ್ ಅಥವಾ ಯಾವುದೇ ದಾಖಲೆ ಪಡೆದುಕೊಳ್ಳದೇ 2020ರಲ್ಲಿ ಸಾಲ ಕೊಟ್ಟಿದ್ದೇನೆ. ನನ್ನ ಮತ್ತು ಆರೋಪಿಯ ಮಧ್ಯೆ ಗೊಬ್ಬರ, ಔಷಧಿ ಮತ್ತು ಬಿತ್ತನೆ ಬೀಜದ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಜೊತೆ ಕೆಲಸ ಮಾಡುತ್ತಿದ್ದಾಗ ಭದ್ರತೆಗಾಗಿ ನೀಡಿದ ಚೆಕ್ಕನ್ನು ನಾನು ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ 2023 ರಲ್ಲಿ ನನ್ನ ಅಂಗಡಿಯನ್ನು ಬಿಟ್ಟು ಗೊಬ್ಬರದ ಕಂಪನಿಯಲ್ಲಿ ಕೆಲಸಕ್ಕೆ ಹೋದರು ಎಂದರೆ ಗೊತ್ತಿಲ್ಲ. 2023-2024ನೇ ಸಾಲಿನಲ್ಲಿ ನನಗೆ ವ್ಯಾಪಾರ ಕಡಿಮೆ ಆಯಿತು ಎಂದರೆ ಇಲ್ಲ. ಆಗ ನಾನು ಆರೋಪಿಯನ್ನು ಹಲವಾರು ಬಾರಿ ಸಂಬಳ ಜಾಸ್ತಿ ಕೊಡುತ್ತೇನೆ ಬನ್ನಿ ಎಂದು ಕರೆದೆ ಎಂದರೆ ಸರಿಯಲ್ಲ. ನಾನು ಆರೋಪಿಯ ಪೂರ್ಣ ಹೆಸರನ್ನು ತಿಳಿದುಕೊಳ್ಳದೇ ಬೇರೆಯವರ ಹೆಸರಿನ ಬಿಲ್ಲುಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಚೆಕ್ಕು ಬರೆದುಕೊಟ್ಟಾಗ ಎಷ್ಟು ದಿನ ಬಿಟ್ಟು ಹಾಜರುಪಡಿಸುವಂತೆ ಆರೋಪಿ ಹೇಳಿದರು ಎಂದರೆ ಒಂದು ವಾರ ಬಿಟ್ಟು ಹಾಜರುಪಡಿಸುವಂತೆ ಹೇಳಿದ್ದಾರೆ. ಈ ವಿಷಯವನ್ನು ದೂರಿನಲ್ಲಿ ಬರೆಸಿದ್ದಿರಾ ಎಂದರೆ ಇಲ್ಲ. ಚೆಕ್ಕು ಕೊಡುವ ಕಾಲಕ್ಕೆ ನಿಮ್ಮ ಜೊತೆ ಬೇರೆ ಯಾರಾದರೂ ಇದ್ದರೇ ಎಂದರೆ ಇಲ್ಲ. ಸಾಕ್ಷಿ ಮುಂದುವರಿದು ನನ್ನ ಅಕೌಂಟೆಂಟ್ ಇದ್ದರು ಎಂದು ನುಡಿಯುತ್ತಾರೆ. ಆರೋಪಿ ಚೆಕ್ಕನ್ನು ನನ್ನ ಅಂಗಡಿಗೆ ತಂದು ಕೊಟ್ಟರು. ಚೆಕ್ಕು ಕೊಟ್ಟಾಗ ನಾನು ಇರಲಿಲ್ಲ ಎಂದರೆ ಇದ್ದೆ. ಚೆಕ್ಕಿನಲ್ಲಿ ಏನು ಹೆಸರಿದೆ ಎಂದು ನೋಡಿದ್ದಿರಾ ಎಂದರೆ ಅಭಿಷೇಕ್ ಹೆಚ್.ಎನ್ ಎಂದು ಹೆಸರಿದ್ದು, ಸಾಕ್ಷಿ ಮುಂದುವರಿದು ಆರೋಪಿಯ ಅಂಗಡಿಯ ಹೆಸರಾದ ಎ.ಎನ್ ಅಗ್ರಿ ಎಂಬ ಹೆಸರಿನ ಚೆಕ್ಕನ್ನು ಕೊಟ್ಟಿದ್ದಾರೆ. ನಾನು ಆರೋಪಿಗೆ ಯಾವುದೇ ಗೊಬ್ಬರ ಕೊಟ್ಟಿಲ್ಲ ಮತ್ತು GST ಸಂಖೆ ಇಲ್ಲ ಎಂರದೆ ಸರಿಯಲ್ಲ. ಸಾಕ್ಷಿ ಮುಂದುವರಿದು ಆರೋಪಿ ಅಂಗಡಿ ತೆರೆಯುವ ಮುಂಚೆ ನನ್ನಿಂದ ಗೊಬ್ಬರ ಖರೀದಿಸಿದ್ದಾರೆ ಎಂದು ನುಡಿಯುತ್ತಾರೆ. ಅಂಗಡಿ ತೆರೆಯುವ ಎಷ್ಟು ವರ್ಷ ಮುಂಚೆ ನಿಮ್ಮಿಂದ ಗೊಬ್ಬರ ಖರಿದಿಸಿದ್ದಾರೆ ಎಂದರೆ ನೆನಪಿಲ್ಲ.

**ಸಿ.ಸಿ. ಸಂಖ್ಯೆ: 106/2023** ಪ್ರಾಸಾ-1

**ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಈಗಾಗಲೇ ಸಾಕಷ್ಟು ಕಾಲಾವಕಾಶ ನೀಡಿದ್ದು, ಸೂಕ್ತ ಕಾರಣಗಳನ್ನು ನೀಡದೇ ಇರುವುದರಿಂದ ಕೋರಿಕೆಯನ್ನು ತಳ್ಳಿ ಹಾಕಿ ಮುಂದುವರಿದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.